## ಇಲ್ಲಿಯವರೆಗೆ



ಒಬ್ಬಳನ್ನೇ ಬಿಟ್ಟುಹೋದ ತುಂಬು ಗರ್ಭಿಣಿ ಅರುಂಧತಿಗೆ ರಾತ್ರಿ ಒಂಭತ್ತು ಗಂಟೆಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಆಕೆಯ ಸುತ್ತ ತುಂಗಮ್ಮ ಮತ್ತು ಅವರ ಮಕ್ಕಳು ಭಯದಿಂದ ನೋಡುತ್ತಾ ನಿಂತಿರುತ್ತಾರೆ. ಮನೋಹರ ಅರುಂಧತಿ ಬಳಿ ಇರುವುದಿಲ್ಲ. ರುದ್ರನಾಗ ಸ್ಮಶಾನದಲ್ಲಿ ಕ್ಷುದ್ರಶಕ್ತಿ ಪ್ರಯೋಗದಲ್ಲಿ ನಿರತನಾಗಿರುತ್ತಾನೆ. ತುಂಗಮ್ಮ ಸೂಲಗಿತ್ತಿ ಮುನಿಯಮ್ಮ ಅವರನ್ನು ಕರೆತರಲು ಹೋಗುತ್ತಾಳೆ. ಈಗ ಅರುಂಧತಿಗೆ ನೋವು ಹೆಚ್ಚಾಗುತ್ತದೆ. ಮನೋಹರ ಕಾರಿನಲ್ಲಿ ಬರುತ್ತಾನೆ. ಅವಳ ನರಳಾಟ ನೋಡಲಾರದೆ ಇಲ್ಲಿಂದ 20 ಕಿಮೀ ದೂರದಲ್ಲಿರುವ ರಾಮನಗರದ ನರ್ಸಿಂಗ್ ಹೋಂನಲ್ಲಿ ಹೆರಿಗೆ ಮಾಡಿಸುವ ಸಲುವಾಗಿ ಕಾರಿನಲ್ಲಿ ಕರೆದುಕೊಂಡು ಹೊರಡುತ್ತಾನೆ. ಮುನಿಯಮ್ಮ ಇರದೇ ಇರುವ ಕಾರಣ ತುಂಗಮ್ಮ ಬರಿಗೈಯಲ್ಲಿ ವಾಪಸಾಗುತ್ತಾಳೆ. ಮನೆಯಲ್ಲಿ ಏನೋ ಶಬ್ದ. ಹಚ್ಚಿದ್ದ ಲಾಟೀನು ಆರಿಹೋಗುತ್ತದೆ. ಮಕ್ಕಳು ಭಯದಿಂದ ತಾಯಿಯನ್ನು ಗಟ್ಟಿಯಾಗಿ ತಬ್ಬಿಕೊಳ್ಳುತ್ತಾರೆ.

ಅರುಂಧತಿಯನ್ನು ಕಾರಿನಲ್ಲಿ ಕಾಡಿನ ಹಾದಿಯಲ್ಲಿ ನರ್ಸಿಂಗ್‌ಹೋಂಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮಳೆ ಬಿರುಗಾಳಿ ಬಂದು ದಾರಿಯ ಅಡ್ಡಲಾಗಿ ಮರದ ರೆಂಬೆಯೊಂದು ಮುರಿದು ಬೀಳುತ್ತದೆ. ಮುಂದೆ ಹೋಗಲು ಬೇರೆ ದಾರಿಯೂ ಇರುವುದಿಲ್ಲ. ಸ್ಮಶಾನದಿಂದ ಮಂತ್ರ ಕೇಳಿಸುತ್ತದೆ. ನೋವು ತಡೆಯಲಾಗದಾಗ ಅರುಂಧತಿ ತುಂಗಮ್ಮನನ್ನು ಕರೆದುಕೊಂಡು ಬರಲು ಮನೋಹರನನ್ನು ಕಳಿಸುತ್ತಾಳೆ.

ರುದ್ರನಾಗ ಕುರಿ ಕೋಳಿಗಳನ್ನು ಕತ್ತರಿಸಿ ಆವಾಹನೆ ಮಾಡಿ ರಕ್ತತರ್ಪಣ ಕೊಡುತ್ತಾನೆ. ಮನೆಯಲ್ಲಿ ತುಂಗಮ್ಮ ಮತ್ತು ಮಕ್ಕಳಿಗೆ ರಕ್ತವಾಂತಿಯಾಗಿ ಮೂವರ ಕತೆಯೂ ಮುಗಿದೇ ಹೋಗುತ್ತದೆ. ರುದ್ರನಾಗನ ಮಂತ್ರಶಕ್ತಿಯಿಂದ ಸ್ವಂತ ಪತ್ನಿ ಮಕ್ಕಳೇ ಸಂಹಾರವಾಗುವಂತಾಗುತ್ತದೆ. ರಾತ್ರಿ 12 ಗಂಟೆಗೆ ಮನೋಹರ ಮನೆಗೆ ಬಂದು ಟಾರ್ಚ್ ಹಾಕಿದಾಗ ಕಂಡುಬಂದ ತುಂಗಮ್ಮ, ಮಕ್ಕಳ ಹೆಣದ ದೃಶ್ಯದಿಂದ ದಿಗಿಲಾಗುತ್ತಾನೆ. ಇತ್ತ ಕಾಡಿನಲ್ಲಿ ಅರುಂಧತಿ ಹೆರಿಗೆ ನೋವು ತಾಳಲಾರದೆ ಕಾರಿನಿಂದ ಇಳಿಯುತ್ತಾಳೆ. ಜೋರಾಗಿ ಮಳೆ ಬರುತ್ತದೆ. ಹೆರಿಗೆಯೂ ಆಗಿ ಅಮಾವಾಸ್ಯೆಯಂದು ಹೆಣ್ಣು ಮಗುವಾಗುತ್ತದೆ. ಆಗಲೇ ತೋಳವೊಂದು ಬಂದು ಮಗುವನ್ನು ಕಚ್ಚಿಕೊಂಡು ಹೋಗುತ್ತದೆ. ಅಳುತ್ತಲೇ ಇರುತ್ತಾಳೆ ಅರುಂಧತಿ. ರುದ್ರನಾಗ ಮನೆಗೆ ಬಂದಾಗ ತನ್ನ ಹೆಂಡತಿ ಮಕ್ಕಳ ಶವ ನೋಡಿ ದಂಗಾಗುತ್ತಾನೆ. ಮನೋಹರನೇ ಕೊಟ್ಟಿದ್ದ ತಲೆಗೂದಲು, ಉಗುರುಗಳನ್ನು ಬಳಸಿ ಕೈಕರಣ ಮಾಡಿ ಈ ಪರಿಸ್ಥಿತಿಗೆ ಕಾರಣವಾಗಿತ್ತು.

ಸ್ವರದಲ್ಲಿ ಲೋಪವಾಗಬಾರದು. ಹಲ್ಲುಗಳನ್ನು ಕಳೆದುಕೊಂಡರೆ ಉಚ್ಚಾರಣೆಯಲ್ಲಿ ಲೋಪ ಉಂಟಾಗುತ್ತದೆ.

ರಾಮಯ್ಯನ ಮತ್ತೊಂದು ಪ್ರತಿಜ್ಞೆ ಸಹ ಈಡೇರಿತ್ತು. ರುದ್ರನಾಗ ಸಾಯಬಾರದು. ತನ್ನಂತೆ ಅವನು ಸಹ ಮಾನಸಿಕ ವೇದನೆ, ದುಃಖವನ್ನು ಅನುಭವಿಸಬೇಕು. ರಾಮಯ್ಯ ಮಕ್ಕಳನ್ನು ಕಲೆದುಕೊಂಡು ದುಃಖ ಅನುಭವಿಸುತ್ತಿದ್ದಾನೆ. ಅದೇ ಪರಿಸ್ಥಿತಿಯನ್ನು ರುದ್ರನಾಗನಿಗೂ ಸಹ ಸೃಷ್ಟಿಸಿದ್ದಾನೆ. ಅಂದು ರಾತ್ರಿ ರುದ್ರನಾಗನ ಮನೆಯಿಂದ ಒಂದು ರೀತಿಯ ಹೊಗೆ ಬಂದಿತ್ತು. ಈ ಹೊಗೆಯ ಹಿಂದೆ ರುದ್ರನಾಗನ ಸಂಸಾರದವರ ಸಾವಿನ ರಹಸ್ಯ ಅಡಗಿತ್ತು...!

* * *

ಇದೊಂದು ರೋಚಕ ಸುದ್ದಿ. ಸಂತೋಷ. ಪರಮಾಶ್ಚರ್ಯ! ನಂಬಿಕೆಯೇ ಬರುತ್ತಿಲ್ಲ. ರುದ್ರನಾಗನಿಗೆ ಯಾರೋ ತುಂಬಾ ಹೊಡೆದಿದ್ದಾರಂತೆ. ಅದೂ ಎಂಥ ಹೊಡೆತ! ಹಲ್ಲುಗಳೆಲ್ಲಾ ಉದುರಿವೆಯಂತೆ. ರುದ್ರನಾಗನಿಗೆ ಗ್ರಹಚಾರ ಸರಿಯಿಲ್ಲ. ಅವನು ಮಾಡಿದ್ದರ ಫಲವನ್ನು ಅವನು ಈ ರೀತಿ ಅನುಭವಿಸುತ್ತಿದ್ದಾನೆ ಬಿಡಿ.

ರುದ್ರನಾಗ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಂದ ಮೇಲೆ ಮನೆಯಲ್ಲೇ ಇದ್ದನು. ಶಿಷ್ಯ ಮದಂತ ಅವನ ಸೇವೆಯನ್ನು ತುಂಬಾ ನಿಷ್ಠೆಯಿಂದ ಮಾಡುತ್ತಿದ್ದಾನೆ. ಅರುಂಧತಿಯ ಮಗು ಸಹ ಅಲ್ಲೇ ಇದೆ. ಯಾವ ಜನ್ಮದ ಸಂಬಂಧವೋ ಏನೋ ಮದಂತ ಆ ಮಗುವಿಗೆ ತಂದೆತಾಯಿ ಆಗಿದ್ದಾನೆ. ಕಂಸ ಮಾವ ಅಲ್ಲೇ ಇದ್ದಾನೆ! ಅವನ ವಕ್ರದೃಷ್ಟಿ ಆಗಾಗ ಈ ಮಗುವಿನ ಮೇಲೆ ಬೀಳುತ್ತಿರುತ್ತದೆ. ಮದಂತನಿಗೆ ಮತ್ತು ರುದ್ರನಾಗನಿಗೆ ಸಂದೇಹ ಕಾಡುತ್ತಲೇ ಇದೆ. ಈ ಕೆಲಸ ಮಾಡಿದ್ದು ಯಾರು? ಒಂದು ವೇಳೆ ತಂಗಿಯ ಗಂಡ ಮನೋಹರನೇ ನಗರದಿಂದ ಬಂದು ಹೊಡೆದಿರಬಹುದೆ? ಸಾಧ್ಯತೆಗಳು ತುಂಬಾ ಇದೆ. ನಾನು ಅವನ ಮೇಲೆ ಪ್ರಯೋಗ ಮಾಡಬಾರದು ಅಂತ ನನ್ನ ಹಲ್ಲುಗಳನ್ನು ಉದುರಿಸಿದ್ದಾನೆ.

ಮನೋಹರ ಕುತಂತ್ರಿ! ಮಹಾ ಮೋಸಗಾರ... ವಂಚಕ. ಅವನೇ ಇದನ್ನು ಮಾಡಿದ್ದಾನೆ. ರಾಮಯ್ಯ... ಹಸಿರು ಗಿಡಗಳ ರಾಮಯ್ಯನ ಮೇಲೆ ಅನುಮಾನ ಬರಲೇ ಇಲ್ಲ. ರಾಮಯ್ಯ ಈಗ ಆ ಊರನ್ನೇ ಬಿಟ್ಟು ಹೋಗಿದ್ದನು. ಅವನನ್ನು ರುದ್ರಾಗ ಮರೆತಿದ್ದನು.

ತಂಗಿ ಮತ್ತು ಅವಳ ಗಂಡನ ಮೇಲೆ ಇದ್ದ ಕೋಪದ್ವೇಷ ಜಾಸ್ತಿಯಾಗಿದೆ. ನೋವಿನಲ್ಲಿಯೂ ನಗುತ್ತಿದ್ದಾನೆ. ಮನೋಹರ... ನೀನು ಸಾವಿನಿಂದ ಪಾರಾಗಲಾರೆ. ನೀನು ಉದುರಿಸಿರುವುದು ನನ್ನ ಹಲ್ಲುಗಳನ್ನು ಮಾತ್ರ. ನನ್ನ ಶಿಷ್ಯ ಒಬ್ಬನಿದ್ದಾನೆ! ಅವನನ್ನು ನಾನು ಪೂರ್ಣ ರೀತಿಯಲ್ಲಿ ತಯಾರು ಮಾಡಿದ್ದೇನೆ. ನನ್ನ ಶಿಷ್ಯ ನನ್ನ ಮಾತನ್ನು ಮೀರಲಾರ. ಇವತ್ತು ರಾತ್ರಿಯೇ ಕೈಕರಣ ಮಾಡಿಸುತ್ತೇನೆ.

* * *

ನಗರದ ಬಂಗಲೆಯ ಬೆಡ್‌ರೂಮಿನಲ್ಲಿ ಕೇಳಿ ಬರುತ್ತಿದೆ ಅಳುವಿನ ಧ್ವನಿ. ಅರುಂಧತಿ ಅಳುತ್ತಿದ್ದಾಳೆ. ಹೆತ್ತಕರುಳಿನ ಸಂಕಟ. ಪಾಪ... ಒಂಭತ್ತು ತಿಂಗಳು ಹೊತ್ತು ಯಮಯಾತನೆ ಅನುಭವಿಸಿ ಹೆತ್ತ ಮಗು ಅವಳಿಂದ ದೂರವಾಗಿದೆ.

ಮಗುವಿನ ಮುಖವನ್ನು ಸಹ ಸರಿಯಾಗಿ ನೋಡಿರಲಿಲ್ಲ ಅವಳು. ಅವಳ ಎದುರಿಗೆ ಮಗುವನ್ನು ತೋಳ ಎತ್ತಿಕೊಂಡು ಹೋಗಿತ್ತು. 'ಗೋಳೋ' ಎಂದು ಅಳುತ್ತಿದ್ದಾಳೆ. ಮನೋಹರ ಸಂತೈಸುತ್ತಿದ್ದಾನೆ. ರುದ್ರನಾಗನ ಹೆಂಡತಿ ಮತ್ತು ಮಕ್ಕಳು ಸತ್ತಿರುವ ಸಂಗತಿಯನ್ನು ಹೇಳಲಿಲ್ಲ.

ಆ ರಹಸ್ಯ ಸಹ ಹೇಳಲಿಲ್ಲ. ಅವರುಗಳ ಸಾವಿಗೆ ಇವನೇ ಕಾರಣ ಅಂತ ಗೊತ್ತಾದರೆ ಅರುಂಧತಿ ಸುಮ್ಮನಿರಲಾರಳು. ಜ್ವಾಲಾಮುಖಿಯಾಗುತ್ತಾಳೆ.

ಅರುಂಧತಿ 'ರೀ... ರೀ... ಬನ್ನಿ... ಬನ್ನಿ... ಕಾಡಿನಲ್ಲಿ ಹುಡುಕೋಣ. ನನ್ನ ಮಗುವಿನ ಅವಶೇಷವಾದರೂ ಸಿಗಬಹುದು.'

ಮನೋಹರ 'ಅರು... ಮಗುವನ್ನು ತೋಳ ಯಾವ ಗುಡ್ಡಕ್ಕೋ, ಗುಹೆಗೋ ಎತ್ತಿಕೊಂಡು ಹೋಗಿದ್ದರೆ ಏನು ಮಾಡುತ್ತೀಯ. ಸ್ವಲ್ಪ ಪ್ರಾಕ್ಟಿಕಲ್ ಆಗಿ ಆಲೋಚನೆ ಮಾಡು.'

ಅರುಂಧತಿ ಹತ್ತು ನಿಮಿಷಗಳ ಕಾಲ ಅತ್ತ ನಂತರ 'ಬನ್ನಿ... ಇವತ್ತೇ ನಮ್ಮ ತವರುಮನೆಗೆ ಹೋಗಿಬರೋಣ'

ಗಾಬರಿಯಿಂದ 'ಯಾಕೆ?'

'ಇದೇನ್ರಿ ಈ ರೀತಿ ಕೇಳ್ತಾ ಇದ್ದೀರ. ನಮ್ಮ ಅಣ್ಣಯ್ಯ ವಿಷಯ ತಿಳಿಯದೆ ತುಂಬಾ ಗಾಬರಿಯಾಗಿರುತ್ತಾನೆ. ಅತ್ತಿಗೆ ನೊಂದುಕೊಂಡಿರುತ್ತಾರೆ. ಅಲ್ಲಿ ಒಂದೆರಡು